ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

**50 ಉಪ ವಲಯ ಅರಣ್ಯಾಧಿಕಾರಿ, 50 ಅರಣ್ಯ ರಕ್ಷಕ ಮತ್ತು 25 ಅರಣ್ಯ ವೀಕ್ಷಕ ಹುದ್ದೆಗಳಿಗೆ ಸ್ಪೋರ್ಟ್ಸ್ ಕೋಟಾದಡಿ ನೇರ ನೇಮಕಾತಿ.**

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ಸ್ಪೋರ್ಟ್ಸ್-ವಿವ-1/2015-16 ದಿನಾಂಕ 03-07-2015**

## ಅಧಿಸೂಚನೆ

ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ಸ್ಪೋರ್ಟ್ಸ್-ವಿವ-1/2015-16 ದಿನಾಂಕ 03-07-2015 ರಲ್ಲಿ 50 ಉಪ ವಲಯ ಅರಣ್ಯಾಧಿಕಾರಿ, 50 ಅರಣ್ಯ ರಕ್ಷಕ ಮತ್ತು 25 ಅರಣ್ಯ ವೀಕ್ಷಕ ಹುದ್ದೆಗಳನ್ನು ಸ್ಪೋರ್ಟ್ಸ್ ಕೋಟಾದಡಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ದಿನಾಂಕ 18-9-2015 ರಲ್ಲಿ 50 ಅರಣ್ಯ ರಕ್ಷಕ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಆಟೋಟಗಳ ಸಂಖ್ಯೆವಾರು, ಮೀಸಲಾತಿ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಒಟ್ಟು 5 ಹುದ್ದೆಗಳು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಹುದ್ದೆಗಳಾಗಿದ್ದು, ಉಳಿದ 45 ಹುದ್ದೆಗಳು ಉಳಿದ ಮೂಲ ವೃಂದದ (Non-Residual Cadre) ಗೆ ಸಂಬಂಧಿಸಿದ ಹುದ್ದೆಗಳಾಗಿರುತ್ತದೆ.

ಸರ್ಕಾರವ ಪತ್ರ ಸಂಖ್ಯೆ: ಅಪಜೀ 152 ಅಅಸೇ 2014 ದಿನಾಂಕ 20-10-2014 ರಲ್ಲಿ ಅರಣ್ಯ ರಕ್ಷಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಸ್ಥಳೀಯ ವೃಂದವನ್ನು ರಚಿಸಿ, ಅಧಿಸೂಚಿಸಿರುವುದರಿಂದ ಅರಣ್ಯ ರಕ್ಷಕ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳನ್ನು ಗುರುತಿಸಿ, ಅವರಿಂದ ಆಯ್ಕೆಯನ್ನು ಪಡೆದು, ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಿ, ಲಭ್ಯವಿರುವ ಖಾಲಿ ಹುದ್ದೆಗಳನ್ನು ಗುರುತಿಸಿ, ರೋಸ್ಟರ್ ಬಿಂದುಗಳನ್ನು ಸರಿದೂಗಿಸಿ, ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅಡಚಣೆ ಇರುವುದಿಲ್ಲವೆಂದು ಸರ್ಕಾರವು ಆದೇಶಿಸಿರುತ್ತದೆ.

ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಬಿ3-ಸಿಬ್ಬಂದಿ-ವಿವ-103/2013-14 ದಿನಾಂಕ 20-08-2015ರ ಆದೇಶದಲ್ಲಿ ಅರಣ್ಯ ರಕ್ಷಕ ಹುದ್ದೆಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಜ್ಯಮಟ್ಟದ ಸ್ಥಳೀಯ ವೃಂದ ಹಾಗೂ ಪ್ರಾದೇಶಿಕ ಸ್ಥಳೀಯ ವೃಂದವನ್ನು ಸೇವಾ ಹಿರಿತನ ಹಾಗೂ ರೋಸ್ಟರ್ ಬಿಂದುಗಳ ಅನುಸಾರ ಸೃಜಿಸಿದ ಪಟ್ಟಿಯನ್ನು ಅಂತಿಮಗೊಳಿಸಿ, ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಹೀಗಾಗಿ, ಅರಣ್ಯ ರಕ್ಷಕ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳೀಯ ವೃಂದವನ್ನು ರಚಿಸಿದಂತಾಗಿದ್ದು, ಕಾರ್ಯ ನಿರ್ವಹಿಸುತ್ತಿರುವ ಅರಣ್ಯ ರಕ್ಷಕರನ್ನು ಅವರವರ ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡ ನೌಕರರಿಗಾಗಿ ಒಟ್ಟು 224 ಹುದ್ದೆಗಳು ಸ್ಥಳೀಯ ವೃಂದ ಸಿಬ್ಬಂದಿಗಾಗಿ ಲಭ್ಯವಿರುತ್ತದೆ. ಈ ಹಿಂದೆ ನೇರ ನೇಮಕಾತಿಗಳಲ್ಲಿ ಆಯ್ಕೆಗೊಂಡ ಅರಣ್ಯ ರಕ್ಷಕರುಗಳ ಪೈಕಿ ಒಟ್ಟು 295 ಸಿಬ್ಬಂದಿಗಳು ಸ್ಥಳೀಯ ವೃಂದವನ್ನು ಸೇರಲು ಆಯ್ಕೆ ಬಯಸಿರುತ್ತಾರೆ. ಹೀಗಾಗಿ ನಿಯಮಗಳ ಅನುಸಾರ ಲಭ್ಯವಿರುವ ಹುದ್ದೆಗಳ ಸಂಖ್ಯೆಯಷ್ಟರ ಮಟ್ಟಿಗೆ ಮಾತ್ರ ಜ್ಯೇಷ್ಠತೆಯ ಆಧಾರದ ಮೇರೆಗೆ ಆಯ್ಕೆಯನ್ನು ಅಂಗೀಕರಿಸಲಾಗಿದೆ.

ಹೀಗಾಗಿ, ಅರಣ್ಯ ರಕ್ಷಕ ಹುದ್ದೆಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಸ್ಪೋರ್ಟ್ಸ್ ಕೋಟಾದ ನೇರ ನೇಮಕಾತಿಯಲ್ಲಿ ಹುದ್ದೆ ಹಂಚಿಕೆ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಆದ್ದರಿಂದ ಅರಣ್ಯ ರಕ್ಷಕ ವೃಂದದಲ್ಲಿ ಸ್ಪೋರ್ಟ್ಸ್ ಕೋಟಾದಡಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಹಂಚಿಕೆ ಮಾಡಲಾದ 5 ಅರಣ್ಯ ರಕ್ಷಕ ಹುದ್ದೆಗಳನ್ನು ಉಳಿದ ಮೂಲ ವೃಂದದ (Non-Residual Cadre) ಗೆ ಮರು ಹಂಚಿಕೆ ಮಾಡಲಾಗಿದೆ. ಹೀಗಾಗಿ, ಅರಣ್ಯ ರಕ್ಷಕ 50 ಹುದ್ದೆಗಳು ಉಳಿದ ಮೂಲ ವೃಂದದ (Non-Residual Cadre) ಕ್ಕೆ ಸೇರಿದ ಹುದ್ದೆಗಳಾಗಿರುತ್ತವೆ. ಉಳಿದಂತೆ ದಿನಾಂಕ 03-07-2015 ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)
ಅಧ್ಯಕ್ಷರು, ವಿಶೇಷ ನೇಮಕಾತಿ ಪ್ರಾಧಿಕಾರ
(ಸ್ಪೋರ್ಟ್ಸ್ ಕೋಟಾ)

ಬೆಂಗಳೂರು,
ದಿನಾಂಕ: 15-10-2015